# ಶೌಚಾಲಯದ ನೀರು ಮರುಬಳಕೆ ತಂತ್ರಜ್ಞಾನ ಅವಿಷ್ಕಾರಿಸಿದ ಸಿಎಂಆರ್‌ಐಟಿ ವಿದ್ಯಾರ್ಥಿಗಳು

ಬೆಂಗಳೂರು, ಜ 16– ಶೌಚಾಲಯಗಳಲ್ಲಿ ಬಳಸುವ ತ್ಯಾಜ್ಯ ನೀರನ್ನು ಮರುಬಳಕಗೆ ಬಳಸುವಂತೆ ಸಂಸ್ಕರಣಾ ಅವಿಷ್ಕಾರವನ್ನು ನಗರದ ಸಿ.ಎಂ. ಆರ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಅವಿಷ್ಕಾರಿಸಿ ಗಮನ ಸೆಳೆದಿದ್ದಾರೆ.ಶೌಚಾಲಯಗಳಲ್ಲಿ ನೀರಿನ ದುಂದು ವೆಚ್ಚದಿಂದ ಅಪಾರ ಪ್ರಮಾಣದ ನೀರು ಪೋಲಾಗುವುದನ್ನು ತಪ್ಪಿಸಲು ಸಿ.ಎಂ,ಆರ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ನೂತನ ವಿಧಾನದಿಂದ ಪರಿಷ್ಕರಿಸಿ ನೀರು ಮರು ಬಳಕೆಗೆ ಸೂಕ್ತ ಎಂಬುದನ್ನು ಆವಿಷ್ಕಾರದ ಮೂಲಕ ನಿರೂಪಿಸಿದ್ದಾರೆ. ಮೂರನೇ ವರ್ಷದ ಮ್ಯಾಕಾನಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಾದ ಸಂಜನಾ, ಆದಿತ್ಯ, ಪ್ರೆಯಶ್, ಗಿರೀಶ್, ರಾಹುಲ್, ಆಯುಷ್ ಶೌಚಾಲಯಗಳ ತ್ಯಾಜ್ಯ ನೀರಿನ ಸಂಸ್ಕರಣಾ ತಂತ್ರಜ್ಞಾನವನ್ನು ರೂಪಿಸಿದ್ದು ಈ ತಂತ್ರಜ್ಞಾನದ ವಿವರಗಳನ್ನು ತಿಳಿಸಿದರು. ಈ ತಂತ್ರಜ್ಞಾನವನ್ನು ಆಸ್ಪತ್ರೆ, ಕಾರ್ಖಾನೆ, ಹೋಟೆಲ್‌ಗಳಲ್ಲಿ ಅಳವಡಿಸಿಕೊಂಡು



ನೀರನ್ನು ಸಂರಕ್ಷಿಸಬಹುದೆಂದು ತಿಳಿಸಿದರು.

ಇನ್ನು ನೀರು ಸಂಸ್ಕರಣಾ ಅನ್ವೇಷಣೆ ಬಗ್ಗೆ ವಿವರಿಸಿದ ವಿದ್ಯಾರ್ಥಿಗಳು ಕೈಗಾರಿಕೆಗಳಿಂದ ಹೊರ ಬರುವ ತ್ಯಾಜ್ಯ ನೀರು ಕೆರೆಗಳನ್ನು ಸೇರಿ ಕಲುಪಿತವಾಗುವಂತೆ ಮಾಡುತ್ತಿದೆ. ಈ ತಂತ್ರಜ್ಞಾನದಿಂದ ಕಡಿಮೆ ವೆಚ್ಚದಲ್ಲಿ ಶುದ್ಧಿಕರಣ ಕಾರ್ಯ ನಡೆಸಬಹುದು ಎಂದು ತೋರಿಸಿಕೊಟ್ಟರು.

ಸಿ.ಎಂ.ಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿನಡೆದತಂತ್ರಜ್ಞಾನ ಪ್ರದರ್ಶನದಲ್ಲಿ ಹಲವಾರು ನೂತನ ಅನ್ವೇಷಣೆಗಳು ಗಮನಸೆಳೆದವು. ರಕ್ಷಣಾ ರಂಗದಲ್ಲಿ ಅತ್ಯುಪಯುಕ್ತವಾದ ಡ್ರೋಣ್‌ಗಳನ್ನು ಮಾಹಿತಿ ರವಾನಗೆ ಬಳಸಬಹುದು. ಗಡಿಯಾಚೆಯಿಂದ ಬರುವ ಡ್ರೋಣ್‌ಗಳನ್ನು ನಿರುಪಯುಕ್ತಗೊಳಿಸುವ ಯಶಸ್ವಿ ಪ್ರಯೋಗಗಳನ್ನು ವಿದ್ಯಾರ್ಥಿಗಳಾದ ಮೂರನೇ ವರ್ಷದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ವಿದ್ಯಾರ್ಥಿಗಳಾದ ವರ್ಷ ಬಿ, ನಿರಂಜನ್, ಅಕ್ಷಯ್ ಕೆ, ಅನುಪ್, ಸಾಯಿ ಪ್ರಸಾದ್, ವಿಕಾಸ್ ಪ್ರದರ್ಶಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಸಂಜಯ್ ಜೈನ್ ಹಾಗೂ ಪ್ರಾಧ್ಯಾಪಕರುಗಳು ವಿದ್ಯಾರ್ಥಿಗಳ ಅನ್ವೇಷಣಾ ತಂತ್ರಜ್ಞಾನವನ್ನು ಶ್ಲಾಘಿಸಿದರು. ಜೊತೆಗೆ ಈ ಯೋಜನೆಗಳನ್ನು ರಾಷ್ಟ್ರಮಟ್ಟದಲ್ಲಿ ಪರಿಶೀಲನೆಗಾಗಿ ಆಯ್ಕೆಮಾಡುತ್ತೇವೆ ಎಂದು ತಿಳಿಸಿದರು. ಇನ್ನು ವಿದ್ಯಾರ್ಥಿಗಳ ಅನ್ವೇಷಣಾ ತಂತ್ರಜ್ಞಾನ ಪ್ರದರ್ಶನವನ್ನು ಪ್ರಾಧ್ಯಾಪಕಿ ಡಾ. ಶರ್ಮಿಳಾ ಸಂಯೋಜನೆ ಮಾಡಿದ್ದರು.

**CHANGE OF NAME**

I, Suresh Singhi, R/at Flat 4-A, Symbiosis Mahaveer Apartment, 5th Main, 6th Cross, Chamarajpet, Bangalore - 560 018, have changed my Daughter's name from Ekta to Ekta Singhi, vide affidavit dated 13.01.2020. Sworn before notary A. Manjula Bangalore.

**ಸುಪ್ರಜಿತ್ ಇಂ**
CIN: L2919
ನೋಂದಾಯಿತ ಕಛೇರಿ: ನಂ.
Telephone: +91+80-
Email: investors@su
ಪ್ರಕ
ಭಾರತದ ಸೆಕ್ಯೂರಿಟೀಸ್ ಎಕ್ಸ್‌ಚೇಂಜ್ ಮಂ
ಮತ್ತು ಹೊಣೆಗಾರಿಕೆ ಅಗತ್ಯತೆಗಳು) ನಿಯಮ